ದಿಃ **24-07-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ **No 1, 3, 4** ರವರ ಪರ ಶ್ರೀ. **DSG** ವಕೀಲರವರಿಂದಃ</u>

**01.** ಈ ದಿನ ನ್ಯಾಯಾಲಯಕ್ಕೆ ನಾನು ಆಸ್ತೀಗೆ ಅರ್ಜಿ ಹಾಕಿರುವುದಕ್ಕೆ ಬಂದಿರುತ್ತೇನೆ. ನನ್ನ ಪ್ರಮಾಣ ಪತ್ರದ ಸಂಗತಿಗಳು ನನಗೆ ಗೊತ್ತಿರುತ್ತವೆ. ಈ ಪ್ರಕರಣವನ್ನು ನಾನು ಪ್ರತಿವಾದಿ **1** ನನ್ನ ತಂದೆ ತಾಯಿ ಮತ್ತು ಪ್ರತಿವಾದಿ **3, 4** ನನ್ನ ತಮ್ಮಂದಿರ ಮೇಲೆ ಹಾಕಿರುತ್ತೇನೆ. ಈ ಪ್ರಕರಣವನ್ನು ನಾನು ನಮಗೆ ಹೊಲ ಬೇಕು ಎಂದು ಹಾಕಿರುತ್ತೇನೆ. ನಾನು **PUC** ವರೆಗೂ ನಾನು ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ತಂದೆ ತಾಯಿಗೆ ಹಿರಿಯ ಮಗಳು ಎಂದರೆ ಸರಿ. ನಾನು ಈ ಪ್ರಕರಣವನ್ನು ದಾಖಲು ಮಾಡುವ ಸಮಯದಲ್ಲಿ **3** ಮತ್ತು **4** ನೇ ಪ್ರತಿವಾದಿಯವರು ಅಲ್ಪವಯಿಗಳು ಇದ್ದರು ಎಂದರೆ ಒಬ್ಬರು ವೈಯಸ್ಸಿಗೆ ಬಂದಿದ್ದರು. ನಾನು **BA** ಪದವಿದರಳು ಎಂದರೆ ಪದವಿ ಪೂರ್ತಿ ಆಗಿರುವುದಿಲ್ಲ. ನನ್ನ ಎಲ್ಲ ವಿಧ್ಯಾಭ್ಯಾಸವನ್ನು ನನ್ನ ತಂದೆ ಮಾಡಿಸಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಎಲ್ಲವನ್ನು ಸರ್ಕಾರಿ ಶಾಲೆ ಮತ್ತು ಕಾಲೇಜಿನಲ್ಲಿ ಮಾಡಿಸಿರುತ್ತಾರೆ. ನಾನು **1** ರಿಂದ **7** ನೇ ತರಗತಿಯವರೆಗೆ ಉತ್ತಂಗಿಯ ಸರ್ಕಾರಿ ಶಾಲೆಯಲ್ಲಿ ಓದಿರುತ್ತೇನೆ, **8** ರಿಂದ **10** ನೇ ತರಗತಿಯವರೆಗೆ ಶಿವಶಂಕರ ಸ್ವಾಮಿ ಪ್ರೌಢ ಶಾಲೆಯಲ್ಲಿ ಓದಿರುತ್ತೇನೆ. ಮತ್ತು ಕೊಟ್ಟುರಿನ ಹಿಂದು ಕಾಲೇಜಿನಲ್ಲಿ **1 PUC** ಹಾಗೂ **2** ನೇ **PUC** ಯನ್ನು **ADB** ಕಾಲೇಜು ಹರಪ್ಪನಹಳ್ಳಿ ಯಲ್ಲಿ ಓದಿರುತ್ತೇನೆ. **BA** ಪದವಿ ರುಂದ್ರಾಭಾ **MP** ಪ್ರಕಾಶ ಕಾಲೇಜಿನಲ್ಲಿ ಓದಿರುತ್ತೇನೆ ಅದು ಅಪೂರ್ಣವಾಗಿರುತ್ತದೆ. ಕೊಟ್ಟುರಿನ ಹಿಂದು ಕಾಲೇಜು ಖಾಸಗಿ ಕಾಲೇಜು ಎಂದರೆ ಸರಿ, ಸಾಕ್ಷಿಯು ಸ್ಕಾಲರ್ ಶಿಪ್ಪ್ ಮೇಲೆ ಓದಿರುತ್ತೇನೆ. ಕೊಟ್ಟುರಿನ ಹಿಂದು ಕಾಲೇಜು ಪ್ರತಿಷ್ಠಿತ ಕಾಲೇಜು ಎಂದರೆ ಸರಿ. **ADB** ಕಾಲೇಜು ಹರಪ್ಪನಹಳ್ಳಿ ಖಾಸಗಿಯಾಗಿದ್ದು ಅದು ಸಹ ಪ್ರತಿಷ್ಠಿತ ಕಾಲೇಜು ಆಗಿರುತ್ತದೆ ಎಂದರೆ ಸರಿ. ನನ್ನ ಸ್ಕಾಲರ್ ಶಿಪ್ಪ್ ವರ್ಷಕ್ಕೆ **2000/-** ಬರುತ್ತಿತ್ತು. ಈ **2000/-** ರೂಪಾಯಿ ಸ್ಕಾಲರ್ ಶಿಪ್ಪ್ ನನ್ನ ವಿಧ್ಯಾಭ್ಯಾಸಕ್ಕೆ ಸಾಕಾಗುತ್ತಿರಲಿಲ್ಲ ಎಂದರೆ ಸರಿ. ಕೊಟ್ಟುರಿನ

**ಹಿಂದು ಕಾಲೇಜು ಓದುವಾಗ ನಾನು ಹಾಸ್ಟೇಲನಲ್ಲಿ ಇರುತ್ತಿದ್ದೆ ಎಂದರೆ ಸರಿ. ಕೊಟ್ಟುರಿನ ಹಿಂದು ಕಾಲೇಜಿನಲ್ಲಿ ಹಾಸ್ಟೇಲನಲ್ಲಿ ಇರುವಾಗ ನನ್ನ ತಂದೆ ಹಾಸ್ಟೇಲಿನ ಫೀಜನ್ನು ಬರೆಸಿರುತ್ತಾರೆ ಎಂದರೆ ಸರಿ, ನಾನೂ ಸಣ್ಣ ಪುಟ್ಟ ಕೆಲಸ ಮಾಡುತ್ತಿದ್ದೇನು. ಹಾಸ್ಟೇಲನಲ್ಲಿ ಯಾವುದೇ ಕೆಲಸಕ್ಕೆ ಅವಕಾಶ ಇರುವುದಿಲ್ಲ ಎಂದರೆ ವಾರ ಅಂತ್ಯಕ್ಕೆ ನಾನು ಮನೆಗೆ ಬಂದಾಗ ಬಟ್ಟೆ ಹೊಲೆಯುವ ಕೆಲಸ ಮಾಡುತ್ತಿದ್ದೇನು. ನನ್ನ ತಂದೆ ತಾಯಿಯು ಸುಮಾರು 4 ಲಕ್ಷ ರೂಪಾಯಿಗಳನ್ನು ನನ್ನ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿರುತ್ತಾರೆ ಎಂದರೆ ಅಷ್ಟು ಆಗಿರುವುದಿಲ್ಲ.**

**ಈ ಹಂತದಲ್ಲಿ ನ್ಯಾಯಾಲಯವು ಮಧ್ಯಸ್ಥಿಕೆಗೆ ಪ್ರಕರಣವನ್ನು ಕಳುಹಿಸುವ ಉದ್ದೇಶದಿಂದ ಪಾಟೀ ಸವಾಲನ್ನು ಮುಂದುಡಿರುತ್ತದೆ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.